

“ಸೌಂಡ್ ಮಾಡಿದ್ರೆ ಕುತಿಗಿ ಕೊಯ್ದುಬಿಡ್ತೀನಿ ಮಗನೇ. ಮುಚ್ಚು ಬಾಯ್” ಅಂದ.

ಅಳುವ ಸ್ವಾತಂತ್ರ್ಯವನ್ನೂ ಕಸಿದುಕೊಂಡ ಅವನನ್ನು, ಸುತ್ತ ಬಂದೂಕು ಹಿಡಿದು ನಿಂತ ಇತರರನ್ನು ನೋಡುತ್ತ, ಮೊಣಕೈಯಿಂದ ಕಣ್ಣೊರೆಸಿಕೊಳ್ಳುತ್ತ ಹುಗ್ಗಿಯ ಕಡೆ ನೋಡಿದೆ. ಜವೆಗೋಧಿ, ಹಲಗಿ ಬೆಲ್ಲ, ಕಮ್ಮಗೆ ಕಾಸಿದ ಆಕಳ ತುಪ್ಪ, ಹದವಾಗಿ ಜಜ್ಜಿ ಹಾಕಿದ ಯಾಲಕ್ಕಿಯ ಪುಡಿಗಳು ಬೆರೆತ ಪರಿಮಳ ಮೂಗಿಗಪ್ಪಳಿಸಿ ಒಂದು ಕ್ಷಣ ನನ್ನಿರವನ್ನೇ ಮರೆತಂತಾದೆ. ಅವರಿಗಾಗಿ ನಾನು ‘ಮ್ಯಾಲಿನವ’ನಾಗಿ ಮರದಿಂದ ಧರೆಗಿಳಿದು ಬಂದಂತೆ, ನನ್ನ ಪಾಲಿಗೆ ಮತ್ತೊಬ್ಬ ‘ಮ್ಯಾಲಿನವ’ ಯಾರೂ ಇರಲಿಲ್ಲ. ಇನ್ನು ನಿಜವಾದ ಮ್ಯಾಲಿನವ ಬರುವುದಂತೂ ದುಸ್ಸಾಧ್ಯದ ಮಾತು. ನನ್ನ ಮುಂದೆ ಈಗ ಎರಡೇ ಆಪ್ಷನ್‌ಗಳಿದ್ದವು– ಸ್ವಾದಭರಿತ ಹುಗ್ಗಿ ಮತ್ತು ಅನಾಥ ಸಾವು.

ನಾನು ಅಸಹಾಯಕನಾಗಿದ್ದೆ.

ಒಂದು ಆಲೋಚನೆ ಬಂತು.

“ಅಣ್ಣಾ, ಈ ಹುಗ್ಗಿ...” ಇನ್ನೂ ಮಾತು ಮುಗಿದಿರಿಲಿಲ್ಲ, ಬೆನ್ನಿಗೆ ಮತ್ತೊಂದು ಬಲವಾದ ಗುದ್ದು.

ವಿಧಿಯಿಲ್ಲದೆ ಒಂದು ತುತ್ತು ತಿಂದೆ.

ಹಿರಿಯ ಹ್ಞೂಂ ಎಂದು ಅಬ್ಬರಿಸಿದ.

ಮತ್ತೊಂದು ತುತ್ತು ತಿಂದೆ.

ಪಕ್ಕದವನೂ ಹ್ಞೂಂಕರಿಸಿದ.

ಮತ್ತೊಂದು ತುತ್ತು ತಿಂದೆ.

ನನಗಂತೂ ಪಕ್ಕಾ ಗೊತ್ತಿತ್ತು – ಆ ಹುಗ್ಗಿಯಲ್ಲಿ ಯಾರೂ ಏನೂ ಬೆರೆಸಿರಲಿಲ್ಲ. ಸೈಕಲ್ ತಾತನ ಮಾತನ್ನು ಶತಾಯಗತಾಯ ಸುಳ್ಳು ಮಾಡಿ ತೋರಿಸಲು ಹೋಗಿ ಅನಾಥ ಶವವಾಗುವುದಕ್ಕಿಂತ; ಚಪ್ಪರಿಸಿ ಹುಗ್ಗಿ ಹೊಡದೇ ಬೆಟ್ಟರಾಯಿತು. ಜೀವವಾದರೂ ಉಳಿಯುತ್ತದೆ. ಜೀವ ದೊಡ್ಡದು. ಸೋಲಿನದೇನು ಪಿಶ್ಯಾ? ಇಷ್ಟಕ್ಕೂ ದೊಡ್ಡವರ ಜತಿಗಿ ಯಾಕಪ್ಪ ಹ್ಯಾಂವಕ್ಕ ಬೀಳಬೇಕು? ನಾಳೆ ಸೈಕಲ್ ತಾತನ ಮನೆಗೆ ಹೋಗಿ ನನ್ನ ಬದುಕಿನಲ್ಲಿ ಮುಂದೆ ಇನ್ನು ಎಂತೆಂಥ ಹುಗ್ಗಿಯ ಅವಕಾಶಗಳಿವೆ ಎಂದು ಕೇಳಿ ತಿಳಿದುಕೊಳ್ಳಬಹುದು. ಭಂಡ ಆದವನಿಗೇ ಬದುಕು ಸಿಗ್ತಾದ. ಬಂದ್ಹಂಗ ಹೋದ್ರೆ ಬಂಧನನೇ ಇಲ್ಲ. ಹೀಗೇ ಏನೇನೋ ಆಲೋಚನೆಗಳು...

ಇನ್ನೊಬ್ಬನನ್ನು ನೋಡಿದೆ. ಅವನು ಸೀದಾ ಬಂದೂಕೇ ಎತ್ತಿದ.

ನಮ್ಮೂರಿನ ಮೊದಲ ಪದವೀಧರನೂ ಕವಿಯೂ ಆದ ನಾನು ಮರುಮಾತೇ ಆಡದೆ ಸಶಬ್ದವಾಗಿ ಸೆಳೆಯತೊಡಗಿದೆ.

ಹುಗ್ಗಿ ನಿಜವಾಗಲೂ ರುಚಿಯಿತ್ತು.


### ಚಿದಾನಂದ ಸಾಲಿ

ಕನ್ನಡದ ಮುಂಚೂಣಿಯ ಈ ಲೇಖಕ ರಾಯಚೂರಿನವರು. ಗಣಿತಶಾಸ್ತ್ರ, ಪತ್ರಿಕೋದ್ಯಮ, ಇಂಗ್ಲಿಷ್, ಶಿಕ್ಷಣಶಾಸ್ತ್ರ ಹಾಗೂ ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರರು. ಕತೆ, ಕವಿತೆ, ಗಜಲ್, ನಾಟಕ, ಪ್ರಬಂಧ, ಸಂದರ್ಶನ, ಸಂಶೋಧನೆ, ಸಂಪಾದನೆ ಮತ್ತು ಅನುವಾದ ಪ್ರಕಾರಗಳಲ್ಲಿ ಈವರೆಗೆ 26 ಕೃತಿಗಳನ್ನು ರಚಿಸಿದ್ದಾರೆ. ಪ್ರಸ್ತುತ ರಾಯಚೂರಿನ ಮೌಲಾನಾ ಆಜಾದ್ ಮಾದರಿ ಶಾಲೆಯ ಮುಖ್ಯೋಪಾಧ್ಯಾಯ.